ಶ್ರೀ ಸಿದ್ದರಾಮಯ್ಯ : ಅದು ಅಧ್ಯಕ್ಷರ ಸೂಚನೆ ಮೇರೆಗೇ ಮಾಡಿದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಖರ್ಗೆಯವರು ಹೇಳಿದ್ದನ್ನು ತಾವು ಗಮನಿಸಲಿಲ್ಲ ಎಂದು ಕಾಣುತ್ತದೆ. ಒಟ್ಟಿಗೆ ಹತ್ತಾರನ್ನು ಇಲ್ಲಿ ಮಂಡಿಸುವ ಪದ್ಧತಿ ಇಲ್ಲ ಸಾರ್ ಪ್ರತಿಯೊಂದನ್ನು ಓದಬೇಕು ರೆಕಾರ್ಡ್‌ಗೆ ಹೋಗಬೇಕು.

ಅಧ್ಯಕ್ಷರು : ನಾನು ಎಲ್ಲಾ ಗಮನಿಸಿದೆ, ಸೆಪರೇಟಾಗಿಯೇ ಲೇ ನಾಳೆಯಿಂದ ಮಾಡಿಸೋಣ ಬಿಡಿ.

12.40 ಪಿ.ಎಂ

6) ವಿಷಯ ಸಮಿತಿಗಳ ವರದಿಗಳನ್ನೊಪ್ಪಿಸುವುದು

ಅಧ್ಯಕ್ಷರು (ಅಧ್ಯಕ್ಷರು, ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖಾವಿಷಯ ಸಮಿತಿ, ಇವರ ಪರವಾಗಿ) : ಕೃಷಿ, ತೋಟಗಾರಿಕೆ, ಪಶು ಸಂಗೋಪನೆ ಮತ್ತು ಮೀನುಗಾರಿಕಾ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಬಿ. ಬಿ. ಹಿರೇರೆಡ್ಡಿ (ಅಧ್ಯಕ್ಷರು, ಇಂಧನ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆಯ1997-98ನೇಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಡಿ. ನಾಗರಾಜಯ್ಯ (ಅಧ್ಯಕ್ಷರು, ಹಣಕಾಸು, ಸಾಂಖ್ಯಿಕ ಹಣಕಾಸು ಮತ್ತು ಯೋಜನಾ ಇಲಾಖೆಯ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ, ಹಣಕಾಸು, ಸಾಂಖ್ಯಿಕ ಹಣಕಾಸು ಮತ್ತು ಯೋಜನಾ ಇಲಾಕೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ರವಿಕಾಂತ್ ಎಸ್. ಪಾಟೀಲ್ (ಅಧ್ಯಕ್ಷರು, ವಸತಿ ಮತ್ತು ನಗರಾಭಿವೃದ್ಧಿ ಇಲಾಖಾ ವಿಷಯ ಸಮಿತಿ, ಇವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಅಭಿಯಂತರರ ಹುದ್ದೆಗೆ ಪದೋನ್ನತಿ ನೀಡುವಾಗ ನಡೆದಿರುವ ಅವ್ಯವಹಾರದ ಬಗ್ಗೆ ವಿಶೇಷ ವರದಿ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಎನ್. ರಾಜಣ್ಣ (ಅಧ್ಯಕ್ಷರು, ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸತಿ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ, ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಹಾಗೂ ಕನ್ನಡ ಮತ್ತು ಸಂಸತಿ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಎ. ಆರ್. ಕೃಷ್ಣಮೂರ್ತಿ : (ಅಧ್ಯಕ್ಷರು, ಸಹಕಾರ ಇಲಾಖಾ ವಿಷಯ ಸಮಿತಿ, ಇವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಹೆಚ್. ಸಿ. ಬಾಲಕೃಷ್ಣ (ಅಧ್ಯಕ್ಷರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೇ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಸಬ್‌ಮರ್ಸಿಬಲ್ ಪಂಪುಸೆಟ್ಟುಗಳನ್ನು ಖರೀದಿಸಿ ಸರಬರಾಜು ಮಾಡಿರುವ ಮತ್ತು ಅವುಗಳ ಕಾರ್ಯ ನಿರ್ವಹಣೆ ಬಗ್ಗೆ ವಿಶೇಷ ವರದಿಯನ್ನು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಡಿ. ಬಿ. ಇನಾಂದಾರ್(ಅಧ್ಯಕ್ಷರು, ನೀರಾವರಿ ಮತ್ತು ಲೋಕೋಪಯೋಗಿ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ, ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಸಿ. ಗುರುನಾಥ್ (ಅಧ್ಯಕ್ಷರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖಾ ವಿಷಯ ಸಮಿತಿ) : ಮಾನ್ಯ ಅಧ್ಯಕ್ಷರೆ, ವಾಣಿಜ್ಯ ಕೈಗಾರಿಕಾ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಹೆಚ್. ಎಸ್. ಪ್ರಕಾಶ್ (ಅಧ್ಯಕ್ಷರು, ಒಳಾಡಳಿತ, ಸಾರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖಾ ವಿಷಯ ಸಮಿತಿ ಪರವಾಗಿ) : ಮಾನ್ಯ ಅಧ್ಯಕ್ಷರೆ, ಒಳಾಡಳಿತ, ಸಾರಿಗೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ 1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಪ್ರಥಮ ವರದಿಯನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ಎಲ್ಲಾ ವಿಷಯ ಸಮಿತಿಗಳ ವರದಿಗಳನ್ನು ಸಭೆಗೆ ಒಪ್ಪಿಸಲಾಯಿತು.